**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 155/2020

ಪಿಡಬ್ಲು : 16 ಸಿಡಬ್ಲು : 18

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ಹಸನಸಾಬ ಅಂಬಲದಗಡಿ |
| ತಂದೆಯ ಹೆಸರು | : | ಶ್ರೀ.ಅಬೂಬಕರ |
| ವಯಸ್ಸು | : | 47 ವರ್ಷ |
| ಉದ್ಯೋಗ | : | ಸೆಂಟರಿಂಗ್ ಕೆಲಸ |
| ವಾಸ್ತವ್ಯ | : | ಬಸರಕೋಡ, ತಾಲೂಕುಃ ಕಿತ್ತೂರು |
| ದಿನಾಂಕ | : | 10-04-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಮೃತ ಬಸವರಾಜ ಮತ್ತು ಆರೋಪಿತರ ಪರಿಚಯ ನನಗೆ ಇರುತ್ತದೆ. ಚಾಸಾಃ 19 ಬಸವರಾಜ ಎಮ್ಮಿ ನನಗೆ ಪರಿಚಯ ಇರುತ್ತಾರೆ. ಬಸವರಾಜ ಎನ್ನುವವರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದರು.

2. ಮೃತ ಬಸವರಾಜ ಅವರು 2ನೇ ಆರೋಪಿ ಮಹಾಂತೇಶ ಪಾಗದ ಅವರಿಗೆ ಸರ್ಕಾರದಿಂದ ಮನೆ ಮಂಜೂರು ಮಾಡಿಸಿಕೊಡುತ್ತೇನೆ ಎಂದು ಹೇಳಿ ಹಣ ತೆಗೆದುಕೊಂಡಿರುತ್ತಾರೆ ಎನ್ನುವ ವಿಚಾರದಲ್ಲಿ ಅವರಿಬ್ಬರಿಗೂ ಜಗಳ ಆಗಿದ್ದು, ಆ ವಿಚಾರದಲ್ಲಿ ನಾವು ಹಿರಿಯರು ಕೂಡಿ ಬಗೆಹರಿಸಿದ್ದೇವು.

3. ಬಸವರಾಜ ಮತ್ತು ಅವರ ಹೆಂಡತಿಯ ನಡುವೆ ಒಂದು ಸಾರಿ ಜಗಳ ಆಗಿತ್ತು, ಆ ವಿಚಾರದಲ್ಲಿ ನಾವು ಹಿರಿಯರು ಕೂಡಿ ಬಗೆಹರಿಸಿದ್ದೇವು. ಬಸವರಾಜ ಅವರು ಈಗ 5-6 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ಬಸವರಾಜ ಅವರ ಸಾವಿನ ವಿಚಾರವಾಗಿ ಪೋಲಿಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ, ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**

" 2ನೇ ಆರೋಪಿ ಮಹಾಂತೇಶ ಪಾಗದ ಅವರ ಹೆಂಡತಿಯೊಂದಿಗೆ ಬಸವರಾಜ ಅವರು ಅಸಭ್ಯವಾಗಿ ನಡೆದುಕೊಂಡಿದ್ದರಿಂದ ಮಹಾಂತೇಶ ಪಾಗದ ಮತ್ತು ಅವರ ಮನೆಯವರು ಬಸವರಾಜನೊಂದಿಗೆ ತಂಟೆ ಮಾಡಿ ಅವನ ಮೇಲೆ ಸಿಟ್ಟಾಗಿದ್ದರು, ಆಗ ನಾನು ಮತ್ತು ನಮ್ಮೂರ ಬಸವರಾಜ ಎಮ್ಮಿ ಕೂಡಿ ಬಸವರಾಜ ದೊಡಮನಿ ಇವನಿಗೆ ಮಹಾಂತೇಶ ಪಾಗದ ಇವನಿಗೆ ಹಾಗೂ ಅವನ ಹೆಂಡತಿಗೆ ಬುದ್ಧಿ ಹೇಳಿ, ಬಸವರಾಜ ದೊಡಮನಿ ಇವನಿಗೆ ಇನ್ನೂ ಮುಂದೆ ಆ ರೀತಿ ನಾಗರತ್ನ ಇವಳೊಂದಿಗೆ ಅಸಭ್ಯವಾಗಿ ವರ್ತಿಸಬೇಡ ಎಂದು ಬುದ್ಧಿ ಹೇಳಿದ್ದೇವು " ಎಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು ನಿಪಿ-71 ಎಂದು ಗುರುತಿಸಲಾಯಿತು.

2. " ಇತ್ತೀಚೆಗೆ ಬಸವರಾಜ ದೊಡಮನಿ ಇವನು ಮಹಾಂತೇಶ ಪಾಗದ ಇವನ ಅಣ್ಣನಾದ ಗೋಪಾಲ ಪಾಗದ ಇವನ ಹೆಂಡತಿ ರೇಣುಕಾ ಇವಳೊಂದಿಗೆ ಸಲುಗೆಯಿಂದ ಮಾತನಾಡುವುದು, ಸೆರೆ ಕುಡಿದು ಬಂದು ಅವರ ಮನೆಯ ಕಡೆಗೆ ಒದರಾಡುವುದು, ಚಿರಾಡುವುದು ಮಾಡುವುದಲ್ಲದೇ ರೇಣುಕಾ ಇವಳೊಂದಿಗೆ ಸಲುಗೆಯಿಂದ

ಮಾತನಾಡಿಸುತ್ತಾ ಅವಳ ಕೂಡ ಅಸಭ್ಯವಾಗಿ ವರ್ತಿಸುವುದು, ಮಾತನಾಡುವುದು, ಅವಳೊಂದಿಗೆ ಮೊಬೈಲನಲ್ಲಿ ಮಾತನಾಡುವುದು, ಅವಳ ಮನೆಯ ಹಿತ್ತಲಿನಲ್ಲಿ ಬಂದು ಬಾಗಿಲು ಬಡೆಯುವುದು, ಕದ ಒದೆಯುವುದು ಮಾಡುತ್ತಿದ್ದನು, ಇದರಿಂದ ರೇಣುಕಾಳ ಗಂಡ ಗೋಪಾಲ ಹಾಗೂ ಅವನ ತಮ್ಮ ಮಹಾಂತೇಶ ಇವರು ಬಸವರಾಜ ದೊಡಮನಿ ಇವನ ಮೇಲೆ ಸಿಟ್ಟಾಗಿ ತಂಟೆ ಮಾಡುತ್ತಿದ್ದರು ಎನ್ನುವ ವಿಷಯ ನನಗೆ ಗೊತ್ತಿರುತ್ತದೆ. " ಎಂದು ನಾನು ಪೋಲಿಸರಿಗೆ ದಿನಾಂಕಃ 05-03-2020 ರಂದು ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿಯ ಹೇಳಿಕೆಯ ಭಾಗವನ್ನು  ನಿಪಿ-71 [ಎ] ಎಂದು ಗುರುತಿಸಲಾಯಿತು.

3.  ನಿಪಿ-71, ನಿಪಿ-71 [ಎ] ನಲ್ಲಿರುವ ವಿಚಾರಗಳು ಸತ್ಯವಾಗಿದ್ದು ನಾನು ಆ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ.ಹೆಚ್.ಸಿ.ಎಸ್. ವಕೀಲರಿಂದ**

ಬಸವರಾಜ ಅವರು ಪಂಚಾಯತಿ ಸದಸ್ಯ ಆಗಿದ್ದು, ಆ ಸ್ಥಾನ ತೆರವು ಆದ ನಂತರ ಅದೇ ಸ್ಥಾನಕ್ಕೆ 2015 ರಲ್ಲಿ ನನ್ನ ಹೆಂಡತಿ ಚುನಾಯಿತರಾಗಿದ್ದರು ಎನ್ನುವುದು ಸರಿ. 2010 ರ ಚುನಾವಣೆಯಲ್ಲಿ  ಜಯಪ್ಪ ಎನ್ನುವವರ ವಿರುದ್ಧ ಬಸವರಾಜ  ಅವರು ಗೆದ್ದಿದ್ದರು ಎನ್ನುವುದು ಸರಿ.  ಕರೆಮ್ಮ ದೇವಸ್ಥಾನದ ಪಕ್ಕದಲ್ಲಿ ಜಯಪ್ಪ ಅವರ ಮನೆ ಇದೆ ಎನ್ನುವುದು ಸರಿ.

2.  2010 ರ ಚುನಾವಣೆಯ ನಂತರ ಜಯಪ್ಪ ಅವರಿಗೂ ಬಸವರಾಜ ಅವರಿಗೂ ಆಗುತ್ತಿರಲಿಲ್ಲ ಎನ್ನುವುದು ಸರಿ. ನಮ್ಮೂರಿಗೆ ಸಂಬಂಧಿಸಿದಂತೆ ಯಾವುದೇ ಸಣ್ಣಪುಟ್ಟ ವಿಚಾರಗಳು ಇದ್ದಾಗ, ಅದು ಕಿತ್ತೂರು ಪೋಲಿಸ ಠಾಣೆಗೆ ಹೋದಂತಹ ಸಂದರ್ಭದಲ್ಲಿ

ನಾನು ಮತ್ತು ಚಾಸಾಃ 19 ಬಸವರಾಜ ಎಮ್ಮಿ ಅವರು ನಮ್ಮೂರಿನ ಹಿರಿಯರಾಗಿ ಅಂತಹ ಸಮಸ್ಯೆಗಳನ್ನು ಬಗೆಹರಿಸಲು ಕಿತ್ತೂರು ಪೋಲಿಸ ಠಾಣೆಗೆ ಹೋಗುತ್ತೇವೆ ಎನ್ನುವುದು ಸರಿ.

3. ನಮ್ಮ ಸಂಬಂಧಿಕರಾದ ಹನೀಫ್ ಎನ್ನುವವರು ಮೃತ ಬಸವರಾಜನೊಂದಿಗೆ ವಿಶ್ವಾಸದಿಂದ ಇದ್ದರು ಎನ್ನುವುದು ಸರಿ. ಪಂಚಾಯತಿ ಕಚೇರಿಗೆ ಹೋಗುವಾಗ ಮೃತ ಬಸವರಾಜ ಮೋಟರಸೈಕಲನಲ್ಲಿ ಹೋಗುತ್ತಿದ್ದರು ಎನ್ನುವುದು ಸರಿ.

4. ಈ ಪ್ರಕರಣದ ಘಟನೆಯ ಆರು ತಿಂಗಳ ಪೂರ್ವದಲ್ಲಿ ನನ್ನ ಸಂಬಂಧಿಕರಾದ ಹನೀಫ್ ಮತ್ತು ಬಸವರಾಜ ಇವರು ಮೋಟರಸೈಕಲನಲ್ಲಿ ಹೋಗುವಾಗ ಬಿದ್ದು ಇಬ್ಬರಿಗೂ ಗಾಯ ಆಗಿತ್ತು ಎಂದು ಸೂಚಿಸುವುದು ಸರಿ. ಅವರಿಬ್ಬರೂ ಹೋಗುತ್ತಿದ್ದ ಮೋಟರಸೈಕಲಗೆ ವಿಮಾ ಪಾಲಿಸಿ ಇರಲಿಲ್ಲ ಮತ್ತು ಚಾಲಕನಿಗೆ ಚಾಲನಾ ಪರವಾನಿಗೆ ಇರಲಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಇಬ್ಬರಿಗೂ ಸಣ್ಣ ಪುಟ್ಟ ಗಾಯಗಳಾಗಿದ್ದವು ಎಂದು ಹೇಳಿದ್ದಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.